**ಸಾಕ್ಷಿಯನ್ನು ದಿಃ *20/02/2024* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಮುಂದುವರೆದ ಪಾಟೀ ಸವಾಲು ಃ ಶ್ರೀ ಎಸ್‌ಟಿಪಿ ವಕೀಲರಿಂದ ವಾದಿ ಪರವಾಗಿ.***

ಸಿಟಿಎಸ್ ನಂ.171/1 ಎ/1 ಎ ಇದು ಇವತ್ತಿಗೂ ಗೇಣಿ ಆಸ್ತಿಯೋ ಅಥವಾ ಮಾಲಿಕತ್ವದ ಆಸ್ತಿಯೋ ಎಂಬ ಪ್ರಶ್ನೆಗೆ ಸಾಕ್ಷಿದಾರರು ನಮ್ಮ ಹೆಸರಿನಲ್ಲಿ ಖರೀದಿ ಮಾಡಿರುವ ಆಸ್ತಿ ಎಂದು ಉತ್ತರಿಸುತ್ತಾರೆ. ಯಾವ ಇಸ್ವಿಯಲ್ಲಿ ಖರೀದಿಯಾಗಿದೆ ಎಂದು ನನಗೆ ಹೇಳಲು ಆಗುವುದಿಲ್ಲ. ಈ ಕುರಿತು ನಾನು ಯಾವ ದಾಖಲೆ ಹಾಜರುಪಡಿಸಿಲ್ಲ. ಈ ರೀತಿ ಇರುವಾಗ ಯಾವ ದಾಖಲಾತಿ ಇಲ್ಲದೆ ಯಾವ ಆಧಾರದ ಮೇಲೆ ನಾವು ಖರೀದಿಸಿದ ಆಸ್ತಿ ಎಂದು ಹೇಳುತ್ತಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ತಂದೆ ಹೇಳಿರುವ ಕಾರಣ ಅದರ ಆಧಾರದ ಮೇರೆಗೆ ಹೇಳುತ್ತಿದ್ದೇನೆ ಎಂದು ಉತ್ತರಿಸುತ್ತಾರೆ. ಈ ಕುರಿತು ದಾಖಲೆಗಳು ನನಗೆ ಹುಡುಕಿದರು ಸಿಗಲಿಲ್ಲ. ನಿ.ಪಿ.3 ರಂತೆ ಇರುವ ದಾಖಲೆ ಪ್ರಕಾರ ಸದರಿ ಆಸ್ತಿ 9 ಜನ ಕೂಡಿ ಖರೀದಿ ಮಾಡಿರುವ ಆಸ್ತಿ ಅದರಂತೆ 9 ಜನರ ಹೆಸರು ದಾಖಲು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.3 ರ ಪೂರಕವಾಗಿ ನಿ.ಪಿ.4 ರಿಂದ 9 ಇರುವಂತ ದಾಖಲಾತಿಗಳು ಎಂದರೆ ನನಗೆ ಗೊತ್ತಿಲ್ಲ. ವಾದಿಯರು ಯಾವ ದಾಖಲಾತಿಗಳನ್ನು ಹಾಜರುಪಡಿಸಿದ್ದಾರೆ ಎಂದು ನಾನು ನಮ್ಮ ವಕೀಲರ ಮೂಲಕ ತಿಳಿದುಕೊಂಡಿರುತ್ತೇನೆ, ಆದರೆ ಈ ದಾಖಲೆಗಳ ಬಗ್ಗೆ ನನಗೆ ಗೊತ್ತಿಲ್ಲ. ನಿ.ಪಿ.3 ರಿಂದ 9 ರಂತೆ ಇರುವ ದಾಖಲಾತಿಗಳನ್ನು ನೋಡಿ ಸಹ ಸದರಿ ಆಸ್ತಿ 9 ಜನ ಕೂಡಿ ಖರೀದಿ ಮಾಡಿದ ಆಸ್ತಿ ಎಂದು ಹೇಳಬಹುದು ಎಂದರೆ ಸಾಕ್ಷಿದಾರರು ಅದನ್ನು ನೋಡಿ ದಾಖಲೆಗಳು ನನಗೆ ಅಷ್ಟೊಂದು ಗೊತ್ತಾಗುವುದಿಲ್ಲ ಎಂದು ಉತ್ತರಿಸುತ್ತಾರೆ. ನಿ.ಪಿ.3 ರಂತೆ ಇರುವ ದಾಖಲೆ ಪ್ರಕಾರ 11 ಜನರ ಹೆಸರು ನಮೂದು ಇರುತ್ತದೆ ಎಂದರೆ ಸಾಕ್ಷಿದಾರರು ದಾಖಲೆಗಳ ಕುರಿತು ನನಗೆ ಅಷ್ಟು ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಸಿಟಿಎಸ ನಂ.171/1 ಎ/1 ಎ ಆಸ್ತಿ ನಮ್ಮ ಮನೆತನದ ಆಸ್ತಿ ಇರುತ್ತದೆ. ಸದರಿ ಆಸ್ತಿ ದಾಖಲಾತಿ ಮೇಲ್ನೋಟಕ್ಕೆ ಹಿಂದೂ ಅವಿಭಕ್ತ ಕುಟುಂಬದ ಆಸ್ತಿ ಎಂದು ಕಂಡು ಬಂದರೂ ಸಹ ಅದನ್ನು ಒಪ್ಪಿಕೊಂಡರೆ ನನಗೆ ವಿರುದ್ದವಾಗಬಹುದು ಎಂದು ನನಗೆ ಗೊತ್ತಿಲ್ಲ ಎಂದು ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಶಿಕ್ಷಿತನಾಗಿದ್ದರೂ ಸಹ ಮತ್ತು ವ್ಯವಹಾರ ಜ್ಞಾನವಿದ್ದರೂ ಸಹ ದಾಖಲಾತಿಗಳು ಗೊತ್ತಾಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಡಿಆರಟಿ ಟ್ರಿಬ್ಯೂನಲ ಮುಂದೆ ಪ್ರೀತಂ ರೇಗೆ ದಾಖಲಿಸಿದ ಅರ್ಜಿ ಯಾವ ಆಸ್ತಿಗೆ ಸೇರಿದ್ದು ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಸಂಬಂಧಪಟ್ಟ ದಾಖಲೆ ಸಾಕ್ಷಿದಾರರಿಗೆ ತೋರಿಸಲಾಗಿ ಅದು ನಿಮ್ಮ ಮನೆತನಕ್ಕೆ ಸಂಬಂಧಿಸಿದ್ದಾ ಎಂದು ಕೇಳಲಾಗಿ ಸಾಕ್ಷಿದಾರರು ಅದನ್ನು ನೋಡಿ ಅದರಲ್ಲಿ ನಮ್ಮ ಮನೆತನದ ಸದಸ್ಯರ ಹೆಸರು ಕಂಡು ಬರುತ್ತದೆ ಆದರೆ ದಾಖಲೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ದಾಖಲೆ ಪ್ರಕಾರ ಕರ್ನಾಟಕ ಬ್ಯಾಂಕವನ್ನು ನಮ್ಮ ಮನೆತನಕ್ಕೆ ಸಾಲವನ್ನು ಕೊಟ್ಟಿದ್ದರು ಎಂದರೆ ನಿಜ. ಅದು ಎಷ್ಟು ಮೊತ್ತದು ಮತ್ತು ಯಾರಿಗೆ ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಯಾವ ಆಸ್ತಿ ಎಂದರೆ ಸಾಕ್ಷಿದಾರರು ರೇಗೆ ಆಟೋ ಸರ್ವಿಸ ಎನ್ನುವ ಗ್ಯಾರೇಜ ಆಸ್ತಿಯ ಮೇಲೆ ಕೊಟ್ಟಿರಬಹುದು ಎಂದು ಉತ್ತರಿಸುತ್ತಾರೆ. ಅದರ ಸಿಟಿಎಸ್ ನಂಬರ ನನಗೆ ಗೊತ್ತಿಲ್ಲ. ಜಗದೀಶ ರೇಗೆ ಇವರು ಸಹ ಸಾಲಗಾರರು ಒಬ್ಬರೇ ಎಂದರೆ ನನಗೆ ಗೊತ್ತಿಲ್ಲ. ಸದರಿ ಡಿಆರಟಿಯಲ್ಲಿ ನನ್ನ ಸಹೋದರ ಪ್ರೀತಂ ರೇಗೆ ಇವರು ಅದನ್ನು ಪ್ರತಿನಿಧಿಸಿದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಫೀಲ ಮೆಮೊದಲ್ಲಿ ರೇಗೆ ಮನೆತನದ ಅವಿಭಕ್ತ ಕುಟುಂಬದ 11 ಸದಸ್ಯರು ಸಾಲವನ್ನು ಪಡೆದಿದ್ದಾರೆ ಎಂದು ಬರೆದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಮಿಕ್ಕಿದ ಆಸ್ತಿಗಳನ್ನು ಸಹ ಸದರಿ ಅಫೀಲ ಮೆಮೊದಲ್ಲಿ ಕಾಣಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ರೀತಿ ಅವಿಭಕ್ತ ಕುಟುಂಬದ ಆಸ್ತಿಗಳು ಎಂದು ಕಾಣಿಸಿದರು ಪ್ರಸ್ತುತ ದಾವೆಯಲಿಲ ಅದೇ ಪ್ರೀತಂ ರೇಗೆ ನಮ್ಮ ಪರವಾಗಿ ವಕಾಲತ್ತು ವಹಿಸಿ ಈ ಎಲ್ಲ ಆಸ್ತಿಗಳು ಅವಿಭಕ್ತ ಕುಟುಂಬದ ಆಸ್ತಿಗಳು ಇರುವುದಿಲ್ಲ ಎಂದು ವ್ಯತಿರಿಕ್ತವಾಗಿ ತಮ್ಮ ನಿಲುವನ್ನು ಹೇಳಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಸದರಿ ಆಸ್ತಿಗಳು ಮಾಧವರಾವ ರೇಗೆ ಇವರಿಗೆ ಸಂಬಂಧಪಟ್ಟ ಆಸ್ತಿಗಳು ಮಾತ್ತ ಎಂದು ಸ್ವತಹಃ ಹೇಳುತ್ತಾರೆ. ಈ ಎಲ್ಲ ಆಸ್ತಿಗಳಲ್ಲಿ ಶಂಕರರಾವ ರೇಗೆ ಇವರ ಕುಟುಂಬಕ್ಕೆ ಸಹ ಪಾಲು ಕೊಡಬೇಕಾಗುತ್ತದೆ ಎನ್ನುವ ಉದ್ದೇಶದಿಂದ ಮಾಧವರಾವ ರೇಗೆ ಇವರಿಗೆ ಮಾತ್ರ ಸಂಬಂಧಪಟ್ಟ ಆಸ್ತಿಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಧಾರವಾಡದ ಹಳೇ ಡಿಎಸಪಿ ಸರ್ಕಲನಲ್ಲಿರುವ ಆಸ್ತಿ ನಂ.58 ಎಂದರೆ ಸಾಕ್ಷಿದಾರರು ನನಗೆ ಆಸ್ತಿನಂಬರ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಆಸ್ತಿಯಲ್ಲಿ ಕಟ್ಟಡ ಮತ್ತು ಖುಲ್ಲಾ ಜಾಗೆ ಇರುತ್ತದೆ. ಸದರಿ ಆಸ್ತಿ ಯಾವ ಮೂಲದಿಂದ ಬಂತು ಎಂದರೆ ಸಾಕ್ಷಿದಾರರು ನನ್ನ ತಂದೆ ಅವರ ಸ್ವಂತ

ಗಳಿಕೆಯಿಂದ ಖರೀದಿ ಮಾಡಿರುವ ಆಸ್ತಿ ಎಂದು ಉತ್ತರಿಸುತ್ತಾರೆ. ಯಾವ ದಿನಾಂಕದಂದು ಖರೀದಿ ಮಾಡಿದ್ದಾರೆ ಎಂದು ನನಗೆ ನೆನಪಿಲ್ಲ. ಸದರಿ ದಾಖಲಾತಿಯನ್ನು ಸಾಕ್ಷಿದಾರರು ನೋಡಿ ಅದನ್ನು ತನ್ನ ತಂದೆ ಜಗದೀಶ ರೇಗೆ ಮತ್ತು ಅರವಿಂದ ರೇಗೆ ಇವರು ಖರೀದಿ ಮಾಡಿದ್ದು ಎಂದು ಉತ್ತರಿಸಿರುತ್ತಾರೆ. ಸಾಕ್ಷಿದಾರರು ಸದರಿ ದಾಖಲೆಯನ್ನು ಗುರುತಿಸಿದ ಕಾರಣ ಅದನ್ನು ***ನಿ.ಪಿ.13*** ಎಂದು ಗುರುತಿಸಲಾಯಿತು. ಅದು ಎಷ್ಟು ಮೊತ್ತಕ್ಕೆ ಖರೀದಿಯಾಗಿದೆ ಎಂದರೆ ಸಾಕ್ಷಿದಾರರು ಸದರಿ ಮೊಬಲಗು ಮೂಲಪ್ರತಿ ನೋಡಿ ಹೇಳಬಹುದು ಎಂದು ಉತ್ತರಿಸುತ್ತಾರೆ. ಖರೀದಿದಾರರಾದ ಜಗದೀಶ ರೇಗೆ ಇವರು ಮಾಧವರಾವ ರೇಗೆ ಇವರ ಮಗ ಮತ್ತು ವಾದಿ ನಂ.2 ಅರವಿಂದ ರೇಗೆ ಇವರು ಶಂಕರರಾವ ರೇಗೆ ಇವರ ಮಗ ಎಂದರೆ ನಿಜ. ಖರೀದಿ ಸಮಯದಲ್ಲಿ ವಾದಿ ನಂ.2 ಅರವಿಂದ ರೇಗೆ ಇವರು ಬೆಳಗಾವಿಯಲ್ಲಿ ವಾಸವಿದ್ದರು ಎಂದರೆ ನಿಜ. ಅದೇ ರೀತಿ ಜಗದೀಶ ರೇಗೆ ಇವರು ಧಾರವಾಡದ ಸರಸ್ವತಪೂರದ ಮನೆಯಲ್ಲಿ ವಾಸವಿರುತ್ತಿದ್ದರು ಎಂದರೆ ನಿಜ. ಸದರಿ ಪ್ರತಿಫಲ 12 ಲಕ್ಷ ರೂಪಾಯಿ ಜಗದೀಶ ರೇಗೆ ಇವರು ಸ್ವಂತ ಆದಾಯದಿಂದ ಖರೀದಿ ಮಾಡಿರುವ ಕುರಿತು ದಾಖಲಾತಿ ನ್ಯಾಯಾಲಯಕ್ಕೆ ಕೊಟ್ಟಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಸದರಿ ಖರೀದಿಗೇ 2 ಲಕ್ಷ ರೂಪಾಯಿಗಳ ಮುಂಗಡ ಹಣ ಕೊಟ್ಟಿದ್ದು ಮತ್ತು 10 ಲಕ್ಷ ರೂಪಾಯಿಗಳನ್ನು ಬ್ಯಾಂಕಿನಿಂದ ಸಾಲ ಮಾಡಿ ಪಡೆದಿದ್ದು ಇರುತ್ತದೆ, ಸದರಿ ಸಾಲದ ಸಂಬಂಧ ದಾಖಲಾತಿ ಹಾಜರುಪಡಿಸಿರುತ್ತೇನೆ ಎಂದು ಉತ್ತರಿಸುತ್ತಾರೆ.

***ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.